**ಹೆಚ್ಚುವರಿ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ  ನಂ. 326/2023**

| | | | |
|---|---|---|---|
| **ಹೆಸರು** | **:** | **ಮೌಲಾನಸಾಬ** | **ಚಾ.ಸಾ.2** |
| **ತಂದೆಯ  ಹೆಸರು** | **:** | **ಇಮಾಮಸಾಬ** | **ಪ್ರಾ.ಸಾ.1** |
| **ವಯಸ್ಸು** | **:** | **48 ವರ್ಷ** | **ದಿನಾಂಕಃ 07-06-2024** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಕೂಪನೂರು** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

2 ನೇ ಆರೋಪಿತರು, ಚಾಸಾ-1, ಚಾಸಾ-3 ಮತ್ತು 4 ರವರು ನನಗೆ ಗೊತ್ತಿಲ್ಲ.  1 ನೇ ಆರೋಪಿ ನನಗೆ ಗೊತ್ತು.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ.  ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ್ಗೆ ಕೆಲವು ವರ್ಷಗಳ ಹಿಂದೆ ಒಂದು ದಿನ ಖರ್ಚಖೆಡ ಹತ್ತಿರ ಹೋಗುತ್ತಿರುವಾಗ ಪೊಲೀಸರು ಸಹಿ ಮಾಡು ಅಂತಾ ಹೇಳಿದಕ್ಕೆ ನಾನು ಸಹಿ ಮಾಡಿರುತ್ತೇನೆ.  ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ಜಪ್ತು ಮಾಡಿಲ್ಲ ಮತ್ತು ಯಾವುದೇ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-**

ದಿನಾಂಕ 07-05-2023 ರಂದು ಮಧ್ಯಾಹ್ನ 12-30 ಗಂಟೆಗೆ ಪೊಲೀಸರು ನನಗೆ ಮತ್ತು ಚಾಸಾ-3 ರವರಿಗೆ ಕರೆಯಿಸಿ ನಿಡಗುಂದಾ ಸಿಮೇಯ ಖರ್ಚಖೇಡ ಕ್ರಾಸ್ ಹತ್ತಿರ ಇಬ್ಬರು ವ್ಯಕ್ತಿಗಳು ಅನಧೀಕೃತವಾಗಿ ಮಧ್ಯಪಾನ ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿ ದಾಳಿಗೆ ಜೊತೆಯಲ್ಲಿ ಬರಲು ತಿಳಿಸಿದರು ಎಂದರೆ ಸರಿಯಲ್ಲ.  ನಂತರ ನಾವು  ಮತ್ತು ಪೊಲೀಸರು ಬಾತ್ಮಿ ಸ್ಥಳಕ್ಕೆ ಠಾಣಾ ಜೀಪಿನಲ್ಲಿ

ಹೋಗಿ ನೋಡಿದಾಗ ಆರೋಪಿತರಿಬ್ಬರು ರಸ್ತೆಯ ಮೇಲೆ ಡಬ್ಬಿಗಳನ್ನು ಇಟ್ಟುಕೊಂಡು ವಾಹನಕ್ಕಾಗಿ ಕಾಯುತ್ತಿದ್ದರು ಎಂದರೆ ಸರಿಯಲ್ಲ. ನಂತರ ಪೊಲೀಸರು ಅವರ ಮೇಲೆ ದಾಳಿ ಮಾಡಿ ಅವರ ಹತ್ತಿರ ಇದ್ದ 6 ಡಬ್ಬಿಗಳನ್ನು ಪರಿಶೀಲಿಸಿ ನೋಡಿದಾಗ ಅವುಗಳನಲ್ಲಿ 180 ಎಮ್.ಎಲ್. ಅಳತೆಯ 240 ಓ.ಸಿ. ಪ್ಯಾಕೆಟಗಳು ದೊರೆಕಿರುತ್ತದೆ ಎನ್ನುವುದು ಸರಿಯಲ್ಲ. ನಂತರ ಆರೋಪಿತರಿಗೆ ವಿಚಾರಿಸಿದಾಗ ತಮ್ಮ ಹತ್ತಿರ ಮದ್ಯ ಪಾನ ಮಾರಾಟ ಮಾಡುವ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಮೇಲೆ ಹೇಳಿದ ವಸ್ತುಗಳನ್ನು ಜಪ್ತಿ ಮಾಡಿ, ನಮ್ಮ ಸಮಕ್ಷಮ ಜಪ್ತಿ ಪಂಚನಾಮೆ ಬರೆದು ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಎಲ್ಲ ಗೊತ್ತಿದ್ದರು ಆರೋಪಿತರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಕೆ.ವಿ.ಬಿ. ವಕೀಲರಿಂದಃ- ಇಲ್ಲಾ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**